ಮಳೆ, ಗುಡುಗು ಹಾಗೂ ಆತ್ಮಗಳನ್ನು ಲೆಕ್ಕಿಸದೇ ಅವಳು ಓಡಿದಳು. ಅವಳ ಪತಿ ಹಾಗೂ ಮುಹೋರಿನಿ ಪರ್ವತ ಶ್ರೇಣಿಯ ಜನಗಳೆಲ್ಲಾ ಲೆಕ್ಕಕ್ಕಿಲ್ಲದಂತೆ ಅದೃಶ್ಯರಾದರು. ಅವಳ ಹೃದಯದ ಮೇಲೆ ಬಿದ್ದಂತಹ ಹೊರೆಯನ್ನು ಎತ್ತಿದಂತೆ, ಅವಳು ಮುಳ್ಳಿನ ಪೊದೆಯ ಮೂಲಕ, ಮರಗಳಿಗೆ ಡಿಕ್ಕಿ ಹೊಡೆಯುತ್ತಾ ಬಿದ್ದು ಏಳುತ್ತಾ ಓಡಿದಳು. ಅವಳ ದೌರ್ಬಲ್ಯ ಹೊರಟು ಹೋಗಿತ್ತು. ಅವಳ ಚಿಂತೆಗಳೂ ಅಷ್ಟೆ. ಅವಳ ಒಂದೇ ಒಂದು ಗುರಿ ಎಂದರೆ ಮರವನ್ನು ತಲುಪುವುದು. ಅದು ಜೀವನ್ಮರಣದ ವಿಷಯವಾಗಿತ್ತು – ಜೀವನಕ್ಕಾಗಿ ಹೋರಾಟ. ಆ ಪವಿತ್ರವಾದ ಮುಗುಮೊ ಮರದ ಕೆಳಗಡೆ ಅವಳು ವಿರಾಮಧಾಮವನ್ನು, ನೆಮ್ಮದಿಯನ್ನು ಕಾಣಬೇಕಿತ್ತು.

ಅಲ್ಲಿ ಮುಕಾಮಿ ತನ್ನ ದೇವರಾದ ಮುರುಂಗು, ತನ್ನ ಜನತೆಯ ದೇವರನ್ನು ಭೇಟಿ ಮಾಡುವುದಿತ್ತು. ಹಾಗಾಗಿ, ದೈಹಿಕ ದೌರ್ಬಲ್ಯವಿದ್ದರೂ ಅವಳು ಓಡಿದಳು. ತನ್ನ ಗರ್ಭದಲ್ಲಿ ಕಿಚ್ಚು ಉರಿಯುವುದನ್ನು ಅನುಭವಿಸಿದಳು. ಅವಳು ಈಗ ವಿರಾಮಧಾಮದ ಬಳಿಯೇ ಇದ್ದಳು, ಅತೀ ಎತ್ತರದ ಮುಕ್ತಿಯ ಬಲಿಪೀಠ, ಹಾಗಾಗಿ ಬಲಿಪೀಠದ ಕಡೆಗೇ ಅವಳು ಓಡಿದಳು, ಇಲ್ಲ, ಓಡುವುದಲ್ಲ, ಹಾರುತ್ತಿದ್ದಳು, ಅವಳ ಆತ್ಮವಂತೂ ಹಾರುತ್ತಲೇ ಇತ್ತು. ಅವಳು ಹಕ್ಕಿಯ ಗರಿಯಂತೇ ಲಘುವಾದಳು. ಕೊನೆಗೂ ತನ್ನ ಸ್ಥಳವನ್ನು ತಲುಪಿದಳು, ಏದುಸಿರು ಬಿಡುತ್ತಾ.

ಮಳೆ ಬೀಳುತ್ತಲೇ ಇತ್ತು. ಆದರೆ ಅದು ಅವಳಿಗೆ ಕೇಳಿಸಲಿಲ್ಲ. ಅವಳು ದೇವರ ಮರದ ಸುರಕ್ಷಿತ ಕೈಗಳ ಕೆಳಗೆ ಮಲಗಿದಳು. ಅವಳ ಮೇಲೆ ಅದರ ಪ್ರಭಾವ ಜೋರಾಗಿತ್ತು.

ಇದ್ದಕ್ಕಿದ್ದಂತೆ ಮುಕಾಮಿ ಎದ್ದಳು, ಏನು! ಯಾರೂ ಇಲ್ಲ? ಖಂಡಿತವಾಗಿಯೂ ಅದೇ ಮುಂಬಿ ತನ್ನ ಪತಿಯ ಪಕ್ಕದಲ್ಲಿ ಅವಳನ್ನು ಮುಟ್ಟಿದಂತೆ, ಒಂದು ಮೃದುವಾದ ಮುಟ್ಟುವಿಕೆ ಅವಳ ದೇಹದಲ್ಲೆಲ್ಲಾ ಹರಿಯಿತು. ಇಲ್ಲ. ತಾನು ಕನಸು ಕಾಣುತ್ತಿರಬಹುದು. ಎಂತಹ ವಿಚಿತ್ರ ಸುಂದರ ಕನಸು. ಮುಂಬಿ ಹೇಳಿದಳು, 'ನಾನು ಒಂದು ದೇಶದ ಮಾತೆ.' ಅವಳು ಸುತ್ತ ನೋಡಿದಳು, ಇನ್ನೂ ಕಗ್ಗತ್ತಲು. ಅಲ್ಲೊಂದು ಪುರಾತನ ಮರ, ಪ್ರಬಲ ಆಯುಸ್ಸು ಆಗದ ಎಷ್ಟೊಂದು ರಹಸ್ಯಗಳನ್ನು ನೀನು ಹುದುಗಿಸಿಕೊಂಡಿದ್ದೀಯೆ?.

'ನಾನು ಮನೆಗೆ ಹೋಗಬೇಕು. ನನ್ನ ಪತಿ ಹಾಗೂ ಜನಗಳ ಬಳಿಗೆ ನಾನು ಹೋಗಬೇಕು.' ನಮ್ರ ಆದರೂ ಆಸೆಗಳನ್ನು ತುಂಬಿದ, ಅವಳೀಗ ಹೊಸ ಮುಕಾಮಿ ಆಗಿದ್ದಳು. ಅವಳು ಮತ್ತೆ ನಿದ್ರೆ ಹೋದಳು. ಆ ಮೋಹಕ ಶಕ್ತಿ ಪೂರ್ವದಲ್ಲಿ ಸೂರ್ಯ ಹುಟ್ಟುತ್ತಿದ್ದ, ಹೊಂಬಣ್ಣದ ಬೆಳಕು ಮುಕಾಮಿ ಮರಕ್ಕೆ ಒರಗಿ ಕುಳಿತ ಕಡೆ ಕಾಡಿನಲ್ಲೆಲ್ಲ ಹರಡಿತ್ತು. ಚದುರಿದ ಬೆಳಕು ತನ್ನ ಚರ್ಮದ ಮೇಲೆ ಬಿದ್ದಾಗ ಒಂದು ರೀತಿಯ ಸಂವೇದನೆ ದೇಹದಲ್ಲೆಲ್ಲ ಚಲಿಸಿದಂತಾಯಿತು. ರಕ್ತ ನಾಳಗಳಲ್ಲಿ ಹೆಪ್ಪುಗಟ್ಟಿದಂತಹ ಅನುಭವ. ಓ! ಅವಳ ದೇಹವೀಗ ಬಿಸಿಯಾಯಿತು. ಹೊಸ ಹುರುಪು ಸಂತೋಷ ಮತ್ತು ಬೆಳಕಿನಿಂದ. ಅವಳ ಆತ್ಮ ನರ್ತಿಸಿತು, ಅವಳ ಗರ್ಭ ಉತ್ತರ ಹೇಳಿತು. ಮತ್ತೆ ಅವಳಿಗೆ ಅರಿವಾಯಿತು, ತಾನು ಗರ್ಭಿಣಿ ಎಂಬುದು ಅರಿವಾಯಿತು. ಸ್ವಲ್ಪ ಕಾಲದಿಂದಲೂ ಅದೇ ಸ್ಥಿತಿಯಲ್ಲಿ ಇದ್ದೇನೆ ಎಂದು.

ಮುಕಾಮಿ ಎದ್ದು ಹೊರಟಾಗ, ಅವಳು ಆಕಾಶದ ಕಡೆ ದಿಟ್ಟಿಸಿದಳು, ಕೃತಜ್ಞತೆ, ನಮ್ರತೆಯ ಕಣ್ಣೀರು ತನ್ನ ಕೆನ್ನೆಗಳ ಮೇಲೆ ಉರುಳಿತು. ಅವಳ ಕಣ್ಣುಗಳು ಕಾಡಿನ ಆಚೆಗೂ, ಕಾಲುವೆಯ ಆಚೆಗೂ ನೋಡಿತು, ಯಾವುದೋ ದೂರದ ಭವಿಷ್ಯದಲ್ಲಿ ಏನೋ ಹುದುಗಿರುವಂತೆ. ಮೊಹೊರಿನಿ ಪರ್ವತದ ಜನಗಳು, ಅವಳ ಪತಿ ಅಷ್ಟೇ ಬಲಿಷ್ಠ ವಯಸ್ಸು ಮೀರದ ವ್ಯಕ್ತಿ ಮಧ್ಯದಲ್ಲಿದ್ದ. ಈಗ ಅದು ಅವಳಿಗೆ ತಕ್ಕ ಜಾಗ, ಆ ಪತಿಯ ಪಕ್ಕದಲ್ಲಿ ಇತರ ಪತ್ನಿಯರ ನಡುವೆ. ಅವರೊಂದಿಗೆ ಒಟ್ಟಿಗೆ ಇರಬೇಕು, ಹೊಸ ಜೀವನವನ್ನು ನಡೆಸುತ್ತಾ. ಮುಂಬಿ ವೀಕ್ಷಿಸುತ್ತಿದ್ದಳೇ?

ದೂರದಲ್ಲಿ ಒಂದು ಹಸು ಜೋರಾಗಿ ಕೂಗಿತು. ಮುಕಾಮಿ ತನ್ನ ಕನಸಿನಿಂದ ಮೇಲೆದ್ದಳು.

'ನಾನು ಹೋಗಬೇಕೇನು?' ಅವಳು ಚಲಿಸಿದಳು. ಮುಗುಮೊ ವೃಕ್ಷ ಅಲ್ಲೇ ಮೌನವಾಗಿ ಸುಭದ್ರ ಹಾಗೂ ನಿಗೂಢ ಸ್ಥಿತಿಯಲ್ಲಿ ನಿಂತಿತ್ತು.

ಪ್ರತಿಕ್ರಿಯಿಸಿ: feedback@sudha.co.in


ಸುಧಾ
ಯುಗಾದಿ ವಿಶೇಷಾಂಕ-2023

## ಪ್ರಬಂಧ ಸ್ಪರ್ಧೆ

| | |
|---|---|
| ಒಂದನೇ ಬಹುಮಾನ: | 10000 |
| ಎರಡನೇ ಬಹುಮಾನ: | 8000 |
| ಮೂರನೇ ಬಹುಮಾನ: | 5000 |

- ಪದಮಿತಿ: 1500 ಶಬ್ದಗಳು.
- ಪ್ರಬಂಧಗಳು ಪತ್ರಿಕೆ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟಗೊಂಡಿರಬಾರದು.
- ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಅಥವಾ ಇ-ಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆ–2023' ಎಂದು ನಮೂದಿಸಿ.
- ಇ-ಮೇಲ್ ಮೂಲಕ ಕಳಿಸುವವರು ನುಡಿ ಅಥವಾ ಯೂನಿಕೋಡ್‌ನಲ್ಲಿ ಕಳುಹಿಸಬಹುದು.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

**ಕೊನೆಯ ದಿನಾಂಕ**
**ಫೆಬ್ರುವರಿ 04, 2023**

ವಿಳಾಸ:
ಸಂಪಾದಕರು
ಸುಧಾ ಯುಗಾದಿ ವಿಶೇಷಾಂಕ
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001
ಇ-ಮೇಲ್:
ugadi@sudha.co.in